# IN THE COURT OF THE ADDL. SENIOR CIVIL JUDGE & JMFC., GUBBI

# **OS – 164/2019**

Witness present and duly sworn on : 29.01.2026.

<u>Further cross Examination: by Counsel for Defendant No.2 :</u>

ದಾವಾ ಆಸ್ತಿಗಳಲ್ಲಿ ಕೆಲವು ಪಿತ್ರಾರ್ಜಿತ ಮತ್ತು ಕೆಲವು ಸ್ವಯಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ. ನನ್ನ ತಂದೆಯ ಜೀವಿತ ಕಾಲದಲ್ಲಿ ಅವರು ಹಲವಾರು ಆಸ್ತಿಗಳನ್ನು ಖರೀದಿ ಮಾಡಿದ್ದರು ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಆಸ್ತಿಗಳ ನನ್ನ ತಾತನ ಆಸ್ತಿಗಳು. ನನ್ನ ತಂದೆಯ ಮರಣದ ನಂತರ ನನ್ನ ತಂದೆಯ ಸ್ವಯಾರ್ಜಿತ ಆಸ್ತಿಗಳ ಖಾತೆ ಪಹಣಿಗಳು ಪೌತಿ ವಾರಸು ಆಧಾರದ ಮೇಲೆ ನನ್ನ ತಾಯಿ 1 ನೇ ಪ್ರತಿವಾಯಾದದ ಕೆಂಪಮ್ಮ ರವರ ಹೆಸರಿಗೆ ಬಂದಿವೆ ಎಂದರೆ ಸರಿ. ನನ್ನ ತಂದೆಯಿಂದ ನನ್ನ ತಾಯಿಗೆ ಬಂದ ಆಸ್ತಿಗಳಲ್ಲಿ ನನ್ನ ತಾಯಿಯು ನನ್ನ ಅಣ್ಣನಾದ 2 ನೇ ಪ್ರತಿವಾದಿ ದಯಾನಂದ ರವರ ಹೆಸರಿಗೆ ದಾನಪತ್ರ ಮಾಡಿದ್ದಾರೆಂದರೆ ಸರಿ. ದಾವಾ ಆಸ್ತಿಗಳಲ್ಲಿ ಆದಾಯ ಇರಲಿಲ್ಲ ಎಂದರೆ ಸರಿಯಲ್ಲ. ಜಮೀನುಗಳಾದ ಸರ್ವೆ ನಂ.5/3 ರಲ್ಲಿ ತೆಂಗು, ಅಡಿಕೆ, ಸರ್ವೆ ನಂ.59/3 ರಲ್ಲಿ ತೆಂಗು, ಸರ್ವೆ ನಂ.62 ರಲ್ಲಿ ತೆಂಗು ಬೆಳೆಗಳು ಇದ್ದವು. ಸರ್ವೆ ನಂ.5/3 ರಲ್ಲಿ 4 ಎಕರೆ 37 ಗುಂಟೆ ಅದಲು ಬದಲು ಆಗಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ದಾನಪತ್ರದ ನಂತರ 2 ನೇ ಪ್ರತಿವಾದಿಯು ಅದಲು ಬದಲು ಮಾಡಿಕೊಂಡಿದ್ದಾರೆ. ಆದಾಯ ಮೂಲವನ್ನು ತೋರಿಸಲು ಪಹಣಿಗಳನ್ನು ಹಾಜರುಪಡಿಸಿದ್ದೇನೆ. ಪಹಣಿಯನ್ನು ಹೊರತುಪಡಿಸಿ ಹಿಡುವಳಿ ದಾಖಲೆ ಹಾಜರುಪಡಿಸಿಲ್ಲ. ಸದರಿ ಜಮೀನುಗಳಲ್ಲಿ ತೆಂಗು, ಅಡಿಕೆ ಇರಲಿಲ್ಲ ಮತ್ತು ಅವುಗಳು ಬರಡು ಭೂಮಿ ಎಂದರೆ ಸರಿಯಲ್ಲ.

ನನ್ನ ತಂದೆಗೆ ಕ್ಯಾನ್ಸರ್ ಕಾಯಿಲೆ ಇತ್ತು ಎಂದರೆ ಸರಿ. ಎಷ್ಟು ವರ್ಷಗಳ ಕಾಲ ಅವರಿಗೆ ಕ್ಯಾನ್ಸರ್ ಕಾಯಿಲೆ ಇತ್ತು ಎಂದರೆ ನನಗೆ ನೆನಪಿಲ್ಲ. ನನ್ನ ತಂದೆಗೆ 2 ನೇ ಪ್ರತಿವಾದಿಯು

ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಾಯಿ ಅಡಿಕೆ ಮತ್ತು ತೆಂಗಿನ ಆದಾಯದಿಂದ ನನ್ನ ತಂದೆಯ ಚಿಕಿತ್ಸೆಯನ್ನು ಮಾಡಿಸುತ್ತಿದ್ದರು. ನನ್ನ ತಾಯಿಗೆ ಆದಾಯ ಇರಲಿಲ್ಲ ಮತ್ತು 2 ನೇ ಪ್ರತಿವಾದಿಯು ನನ್ನ ತಂದೆಯ ಚಿಕಿತ್ಸೆಯನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಬೆಂಗಳೂರಿನ ಕೆಂಪೆಗೌಡ ಆಸ್ಪತ್ರೆಯಲ್ಲಿ ನನ್ನ ತಂದೆಗೆ ಚಿಕಿತ್ಸೆ ಕೊಡಿಸುತ್ತಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಆಸ್ಪತ್ರೆಯಲ್ಲಿ ನನ್ನ ತಾಯಿ ಚಿಕಿತ್ಸೆ ಕೊಡಿಸುತ್ತಿದ್ದರು. ನನ್ನ ತಾಯಿಗೆ ಸಾಮಾಜಿಕ ಜ್ಞಾನ ಇರದೆ ಇದ್ದ ಕಾರಣ ನನ್ನ ತಾಯಿ ಮತ್ತು 2 ನೇ ಪ್ರತಿವಾದಿಯು ಸೇರಿ ನನ್ನ ತಂದೆಗೆ ಚಿಕಿತ್ಸೆ ಕೊಡಿಸುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಂದೆಯ ಕ್ಯಾನ್ಸರ್ ಚಿಕಿತ್ಸೆಗೆ ನನ್ನ ತಾಯಿ ಮತ್ತು 2 ನೇ ಪ್ರತಿವಾದಿ ಸುಮಾರು 35 ಲಕ್ಷ ಖರ್ಚು ಮಾಡಿದ್ದಾರೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ತಾಯಿ ಸದರಿ ಚಿಕಿತ್ಸೆಯನ್ನು ನೋಡಿಕೊಳ್ಳುತ್ತಾರೆ. ಆದಾಯ ಮೂಲ ಇರದೆ ಇದ್ದ ಕಾರಣ 1 ಮತ್ತು 2 ನೇ ಪ್ರತಿವಾದಿಗಳು ಸರ್ವೆ ನಂ.5/3 ಮತ್ತು 59/3 ಆಸ್ತಿಗಳನ್ನು ಮಾರಾಟ ಮಾಡಿದರು ಎಂದರೆ 2 ನೇ ಪ್ರತಿವಾದಿ ಮಾತ್ರ ಮಾರಾಟ ಮಾಡಿರುತ್ತಾರೆ. ವಿನಾಕಾರಣ ಖರ್ಚು ಆಗಿರುವುದಿಲ್ಲ ಮತ್ತು ನನ್ನ ತಂದೆಯ ಚಿಕಿತ್ಸೆಯ ಹಣಕ್ಕೆ ಮಾರಾಟದ ಹಣವನ್ನು ಉಪಯೋಗ ಮಾಡಿದ್ದಾರೆಂದರೆ ಸರಿಯಲ್ಲ.

ನನ್ನ ಮದುವೆಯನ್ನು ಗುಬ್ಬಿಯ ಬಾವಿಮನೆ ಕಲ್ಯಾಣ ಮಂಟಪದಲ್ಲಿ ಮಾಡಿರುತ್ತಾರೆ. ಸಾಕ್ಷಿ ಮುಂದುವರೆದು ನನ್ನ ಮದುವೆಯನ್ನು ಮಾಡಿಕೊಂಡಿರುತ್ತಾರೆ. ಅದನ್ನು ತೋರಿಸಲು ನಾನು ದಾಖಲೆಯನ್ನು ಹಾಜರುಪಡಿಸಿಲ್ಲ. 1 ಮತ್ತು 2 ನೇ ಪ್ರತಿವಾದಿಗಳು ಅದ್ದೂರಿಯಾಗಿ ನನ್ನ ಮದುವೆ ಮಾಡಿ, ನನಗೆ ಚಿನ್ನಾಭರಣಗಳನ್ನು ಕೊಟ್ಟು, ಸದರಿ ಮದುವೆಗೆ ಸುಮಾರು 30 ಲಕ್ಷ ಖರ್ಚು ಮಾಡಿದ್ದರು ಎಂದರೆ ಸರಿಯಲ್ಲ.

ಕಡಬಾ ಹೋಬಳಿ, ಹೊನ್ನಶೆಟ್ಟಿಹಳ್ಳಿಯ ಸರ್ವೆ ನಂ.14/6 ಎ ರಲ್ಲಿ 21 ಗುಂಟೆ ಮತ್ತು ಸರ್ವೆ ನಂ.13/2 ರಲ್ಲಿ 16 ಗುಂಟೆ ಜಮೀನುಗಳು ನನ್ನ ತಂದೆಯ ಆಸ್ತಿಗಳು ಎಂದರೆ ನನ್ನ ತಾತನ ಆಸ್ತಿಗಳು. ಸದರಿ ಜಮೀನುಗಳನ್ನು ಮತ್ತು ಅದರಲ್ಲಿ ಇರುವ ವ್ಯಕ್ತಿಗಳನ್ನು ಈ ದಾವೆಯಲ್ಲಿ ಸೇರಿಸಿದ್ದಿರಾ ಎಂದರೆ ನನ್ನ ತಂದೆಯ ಕಾಲದಲ್ಲಿ ಮಾರಾಟ ಆಗಿರುತ್ತದೆ. ಸದರಿ

ಜಮೀನುಗಳನ್ನು 4 ನೇ ಪ್ರತಿವಾದಿಯಾದ ಮಂಜುಳಾ ರವರ ಮದುವೆಯ ಸಮಯದಲ್ಲಿ ಮಾರಾಟ ಮಾಡಿರುತ್ತಾರೆಂದರೆ ಸರಿಯಲ್ಲ. ಐಟಂ ನಂ.1 ರಿಂದ 3 ಆಸ್ತಿಗಳನ್ನು 3 ನೇ ಪ್ರತಿವಾದಿಯಾದ ಪದ್ಮವತಿ ರವರ ಮದುವೆಗೆ ಮಾರಾಟ ಮಾಡಿದ್ದಾರೆಂದರೆ ಸರಿಯಲ್ಲ. 3 ನೇ ಪ್ರತಿವಾದಿಯ ಮದುವೆಯನ್ನು ಎಲ್ಲಿ ಮಾಡಿದ್ದಾರೆಂದರೆ ನಾನು ಚಿಕ್ಕವಳಿದ್ದೆ ಆದ ಕಾರಣ ನನಗೆ ಗೊತ್ತಿಲ್ಲ. 3 ನೇ ಪ್ರತಿವಾದಿಯ ಮದುವೆಯನ್ನು ಗುಬ್ಬಿಯ ನಾಗಲಿಂಗೇಶ್ವರ ಕಲ್ಯಾಣ ಮಂಟಪದಲ್ಲಿ ಮಾಡಿದ್ದಾರೆಂದರೆ ನನಗೆ ಗೊತ್ತಿಲ್ಲ. ಸದರಿ ಮದುವೆ ಆದಾಗ ನಾನು SSLC ಓದುತ್ತಿದ್ದೇನು. ಆದಾಯ ಮೂಲ ಇರದೆ ಇದ್ದ ಕಾರಣ ಹೆಣ್ಣು ಮಕ್ಕಳ ಮದುವೆ ಮತ್ತು ತನ್ನ ತಂದೆಯ ಚಿಕಿತ್ಸೆಗೆ ಆಸ್ತಿಗಳನ್ನು ಮಾರಾಟ ಮಾಡಿದ್ದಾರೆಂದರೆ ಸರಿಯಲ್ಲ.

ದಾವಾ ಐಟಂ ನಂ.4 ಖಾನೆಶುಮಾರಿ ನಂ.201/203 ಆಸ್ತಿಯು ನನ್ನ ತಾತನ ಸ್ವತ್ತು. ಸದರಿ ಆಸ್ತಿಯನ್ನು 1 ನೇ ಪ್ರತಿವಾದಿ ನನಗೆ ದಾನಪತ್ರ ಮಾಡಿದ್ದಾರೆಂದರೆ ಸರಿ. ಸದರಿ ದಾನಪತ್ರ ಮಾಡುವ ಕಾಲದಲ್ಲಿ ಆಸ್ತಿಗಳಲ್ಲಿ ಭಾಗಾಂಶ ಬೇಡ ಎಂದು ದಾವಾ ಐಟಂ ನಂ.4 ಜಮೀನನ್ನು ದಾನ ಪಡೆದಿದ್ದೇನೆಂದರೆ ಸರಿಯಲ್ಲ. ನನ್ನ ಗಂಡನ ಮನೆ ಕಡೆ ಯಾವುದೇ ಆದಾಯ ಮೂಲ ಇಲ್ಲ ಎಂದರೆ ಕೂಲಿ ಮಾಡಿ ನಮ್ಮನ್ನು ಸಾಕುತ್ತಿದ್ದಾರೆ. ನಾನು 2 ನೇ ಪ್ರತಿವಾದಿಯ ಹತ್ತಿರ ಬೆಂಗಳೂರಿನಲ್ಲಿ ನಿವೇಶನ ಖರೀದಿ ಮಾಡಲು ಹಣ ಕೇಳಿದ್ದೇನೆಂದರೆ ಸರಿಯಲ್ಲ. 2 ನೇ ಪ್ರತಿವಾದಿಯು ಹಣವನ್ನು ನನ್ನ ತಂದೆಯ ಚಿಕಿತ್ಸೆ ಮತ್ತು ನನ್ನ ಮದುವೆಗಳಿಗೆ ಖರ್ಚು ಮಾಡಿದ್ದು, ನಂತರದಲ್ಲಿ ಕೊಡುತ್ತೇನೆಂದು ಹೇಳಿದ್ದರು ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯು ಹಣ ಕೊಡಲಿಲ್ಲ ಎಂದು ನಾನು ನನ್ನ ತಾಯಿ, ಅಣ್ಣ ಮತ್ತು ಇತರರ ವಿರುದ್ಧ ಈ ದಾವೆ ಸಲ್ಲಿಸಿದೆನು ಎಂದರೆ ಸರಿಯಲ್ಲ.

ದಾವಾ ಆಸ್ತಿಗಳ ಮೇಲೆ ರಾಷ್ಟ್ರೀಯ ಬ್ಯಾಂಕ್ ಗಳಲ್ಲಿ ಸಾಲ ಇದೆ ಎಂದರೆ ನನಗೆ ಗೊತ್ತಿಲ್ಲ. ದಾಖಲೆಗಳನ್ನು ನ್ಯಾಯಾಲಯದಲ್ಲಿ ಹಾಜರುಪಡಿಸುವ ಪೂರ್ವದಲ್ಲಿ ಸದರಿ ವಿವರಗಳನ್ನು ಪರಿಶೀಲನೆ ಮಾಡಿರುವುದಿಲ್ಲ. ನನ್ನ ತಂದೆಯ ಜೀವಿತ ಕಾಲದಲ್ಲಿ ಅವರು ವಿಜಯ ಬ್ಯಾಂಕ್ ನಲ್ಲಿ ಸಾಲ ಪಡೆದಿದ್ದರು ಎಂದರೆ ನನಗೆ ಗೊತ್ತಿಲ್ಲ. ಕಲ್ಪತರು ಗ್ರಾಮೀಣ ಬ್ಯಾಂಕ್ ನಲ್ಲಿಯೂ ಸಹ ದಾವಾ ಆಸ್ತಿಗಳ ಮೇಲೆ ಸಾಲ ಇದೆ ಎಂದರೆ ನನಗೆ ಗೊತ್ತಿಲ್ಲ.

ಮೊದಲು ಮೈಸೂರು ಬ್ಯಾಂಕ್ ನಲ್ಲಿಯೂ ಸಹ ಸದರಿ ಆಸ್ತಿಗಳ ಮೇಲೆ ಸಾಲ ಪಡೆದಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಸಾಲದ ತಿರುವಳಿ ಆಗಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸದರಿ ಸಾಲಗಳನ್ನು ಜಮೀನುಗಳ ಅಭಿವೃದ್ದಿಗೆ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ದಾವಾ ಸಲ್ಲಿಸಲು ಯಾವುದೇ ವ್ಯಾಜ್ಯ ಕಾರಣ ಇಲ್ಲದೆ ಇದ್ದರು ಸಹ ನಾನು ವ್ಯಾಜ್ಯ ಕಾರಣ ವನ್ನು ಸೃಷ್ಟಿಸಿ ಈ ದಾವೆ ಸಲ್ಲಿಸಿದ್ದೇನೆಂದರೆ ಸರಿಯಲ್ಲ.

(Further cross examination deferred at the request of counsel for the defendant No.2)

(Typed to my dictation in open court)

R.O.I & A.C.

Addl. Senior Civil Judge and
JMFC., Gubbi